**2 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ.123/2021**

**ದಿನಾಂಕಃ 25.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಿ.ಡಬ್ಲ್ಯೂಃ 1    ಸಿ.ಡಬ್ಲ್ಯೂಃ 1**

| | | |
|---|---|---|
| ಸಾಕ್ಷಿಯ ಹೆಸರು | : | ಮೌನೇಶ್ |
| ತಂದೆ ಹೆಸರು | : | ನಿಂಬೆಣ್ಣ ದೊಡ್ಮನಿ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಪಿಎಸ್ಐ |
| ವಾಸ | : | ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ಅವರಿಂದಃ–**

ನಾನು ಆಗಸ್ಟ್ 2019 ರಿಂದ ಆಗಸ್ಟ್ 2020 ರವರೆಗೆ ಸಖರಾಯಪಟ್ಟಣ ಪೋಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

ದಿನಾಂಕ 01.05.2020 ರಂದು ನಾನು ಠಾಣೆಯಲ್ಲಿ ಇರುವಾಗ ಬಾತ್ಮಿದಾರರಿಂದ ನನಗೆ ಮಧ್ಯಾಹ್ನ 3.00 ಗಂಟೆಗೆ ಮಾಹಿತಿ ಬಂದಿದ್ದು, ಹಳೆಸಿದ್ದರಹಳ್ಳಿಯಲ್ಲಿ ಯಾರೋ ಆಸಾಮಿ ಅಕ್ರಮವಾಗಿ ಕಳ್ಳಬಟ್ಟಿಯನ್ನು ತಯಾರಿಸಿ ಮಾರಾಟ ಮಾಡುತ್ತಿರುತ್ತಾರೆ ಎಂದು ಮಾಹಿತಿ ತಿಳಿಸಿದ್ದು, ಸದರಿ ಮಾಹಿತಿ ಆಧಾರದ ಮೇರೆಗೆ ನಾನು ಖಾಸಗಿ ವಾಹನದಲ್ಲಿ ನನ್ನ ಸಿಬ್ಬಗಳೊಂದಿಗೆ ಹಳೆಸಿದ್ದರಹಳ್ಳಿಯ ಬಳಿ ಹೋಗಿ ಅಲ್ಲಿ ರಸ್ತೆಯಲ್ಲಿ ಹೋಗುತ್ತಿದ್ದ ಇಬ್ಬರು ಆಸಾಮಿಗಳನ್ನು ಪರಿಚಯ ಮಾಡಿಕೊಂಡು ದಾಳಿಯ ಬಗ್ಗೆ ತಿಳಿಸಿ ಸದರಿಯವರು ಒಪ್ಪಿದ ಮೇರೆಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸಾಕ್ಷಿಯು ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

ನಂತರ ಪಂಚರನ್ನು ಜೊತೆಯಲ್ಲಿಯೇ ಕರೆದುಕೊಂಡು ಆರೋಪಿಯ ಮನೆಯ ಬಳಿ ಹೋಗಿ ನೋಡಿದಾಗ ನಮ್ಮನ್ನು ನೋಡಿ ಒಬ್ಬ ವ್ಯಕ್ತಿಯ ಓಡಿಹೋಗಿರುತ್ತಾನೆ.

ಪಂಚರನ್ನು ಓಡಿಹೋದ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ, ಓಡಿಹೋದ ವ್ಯಕ್ತಿಯ ಹೆಸರು ಮಹೇಶ್ ಎಂಬುದಾಗಿ ನನಗೆ ತಿಳಿಸಿರುತ್ತಾರೆ. ನಂತರ ಮನೆಯ ಪಕ್ಕದಲ್ಲಿ ಪರಿಶೀಲಿಸಿ ನೋಡಲಾಗಿ, 750 ಎಂ.ಎಲ್.ನ ಸ್ಟ್ರೈಟ್ ನ ಪ್ಲಾಸ್ಟಿಕ್ ಬಾಟಲು ನಮಗೆ ಸಿಕ್ಕಿರುತ್ತದೆ. ಅದನ್ನು ತೆರೆದು ನೋಡಲಾಗಿ ಅದರೊಳಗೆ ಕಳ್ಳಬಟ್ಟಿ ಇರುವುದು ಕಂಡುಬಂದಿರುತ್ತದೆ. ಅದರ ಪಕ್ಕದಲ್ಲಿ ಪ್ಲಾಸ್ಟಿಕ್ ಬಿಂದಿಗೆ ಇರುವುದು ಕಂಡುಂಬಂದಿರುತ್ತದೆ. ಅದನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ ಬೆಲ್ಲವನ್ನು ಕೊಳೆಯಲು ಇಟ್ಟಿರುವುದು ಕಂಡುಬಂದಿರುತ್ತದೆ. ಸದರಿ ವಿಚಾರವಾಗಿ ನಾನು ಸ್ಥಳದಲ್ಲಿಯೇ ವರದಿಯನ್ನು ತಯಾರಿಸಿ ನನ್ನ ಸಿಬ್ಬಂದಿಯಾದ ಚಾಸಾ-2 ರವರ ಹಸ್ತ ಠಾಣೆಗೆ ಕಳುಹಿಸಿ ಪ್ರ.ವ.ವರದಿಯನ್ನು ದಾಖಲಿಸಿಕೊಂಡು ಬರುವಂತೆ ತಿಳಿಸಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು.

ನಂತರ ಚಾಸಾ-2 ರವರು ಪ್ರ.ವ.ವರದಿಯನ್ನು ದಾಖಲಿಸಿಕೊಂಡು ಪುನಃ ಅದನ್ನು ತೆಗೆದುಕೊಂಡು ಘಟನಾ ಸ್ಥಳಕ್ಕೆ ಬಂದಿದ್ದು, ನಂತರ ಪಂಚರ ಸಮಕ್ಷಮ ಸಂಜೆ 6.00 ಗಂಟೆಯಿಂದ 7.00 ಗಂಟೆಯವರೆಗು ಮಹಜರು ಕ್ರಮ ಜರುಗಿಸಿ, ಛಾಯಾಚಿತ್ರವನ್ನು ತೆಗೆಸಿರುತ್ತೇನೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಪಂಚರ ಸಮಕ್ಷಮ ಸ್ಟ್ರೈಟ್ ನ ಪ್ಲಾಸ್ಟಿಕ್ ಬಾಟಲು ಮತ್ತು ಪ್ಲಾಸ್ಟಿಕ್ ಬಿಂದಿಗೆಯನ್ನು ವಶಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಸ್ಟ್ರೈಟ್ ನ ಪ್ಲಾಸ್ಟಿಕ್ ಬಾಟಲನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು, ಸಾಕ್ಷಿಯ ಸಹಿಯನ್ನು ಮು.ಮಾ-1 ಎ ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮುದ್ದೆಮಾಲಿನೊಂದಿಗೆ ಮತ್ತು ಮಹಜರಿನೊಂದಿಗೆ ಠಾಣೆಗೆ ತೆರಳಿ ಮುದ್ದೆಮಾಲನ್ನು ಮಾಲುಪಟ್ಟಿ ಸಂಖ್ಯೆ - 47/2020 ರಂತೆ ನಮೂದಿಸಿಕೊಂಡು ನ್ಯಾಯಾಲಯದ ಅನುಮತಿಗಾಗಿ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-2 ರಿಂದ 4 ಹಾಗೂ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ 14.05.2020 ರಂದು ಚಿಕ್ಕಮಗಳೂರಿನ ಅಬಕಾರಿ ಇಲಾಖೆಯ ಪ್ರಾಧಿಕೃತ ಅಧಿಕಾರಿಗಳಿಗೆ ಅಮಾನತ್ತುಪಡಿಸಿಕೊಂಡ ಪ್ಲಾಸ್ಟಿಕ್ ಕೊಡಪಾನ ಮತ್ತು ಅದರೊಳಗಿರುವ ಕೊಳೆಯನ್ನು ತಮ್ಮ ಇಲಾಖೆಗೆ ವರ್ಗಾವಣೆ ನೀಡಲು ಅನುಮತಿ ಕೋರಿ

ಮನವಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.5 ಎ ಎಂದು ಗುರುತಿಸಲಾಯಿತು.

ದಿನಾಂಕ 18.05.2020 ರಂದು ಚಿಕ್ಕಮಗಳೂರಿನ ಸಹಾಯಕ ರಾಸಾಯನಿಕ ತಜ್ಞರು ಪ್ರಾದೇಶಿಕ ಪ್ರಯೋಗ ಕೇಂದ್ರರವರಿಗೆ ರಾಸಾಯನಿಕ ಪರೀಕ್ಷೆಗೆಂದು ವಶಪಡಿಸಿಕೊಂಡ ಹಸಿರು ಬಣ್ಣದ ಸ್ಪ್ರೈಟ್ ನ ಪ್ಲಾಸ್ಟಿಕ್ ಬಾಟಲು ಮತ್ತು ಅದರಳೊಗಿರುವ ಸಾರಾಯಿಯನ್ನು ಪರೀಕ್ಷಿಸಲು ಕೋರಿ ಮನವಿ ಪತ್ರದೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ಆರೋಪಿಯು ನ್ಯಾಯಾಲಯದಲ್ಲಿ ಈ ದಿನ ಗೈರು ಹಾಜರಿದ್ದು, ಆರೋಪಿಯ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಮ್ಮ ಪರ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಬಿ. ವಕೀಲರಿಂದ:**

ನಮ್ಮ ಠಾಣೆಯಿಂದ ಹೊಸಸಿದ್ದರಹಳ್ಳಿಗೆ ಸುಮಾರು 10 ಕಿ.ಮೀ. ಅಂತರವಿರುತ್ತದೆ. ಮಂಜಮ್ಮನ ಮನೆಯ ಪಕ್ಕ ಎಂದು ನನ್ನ ವರದಿಯಲ್ಲಿ ನಮೂದಿಸಿದ್ದು, ಸದರಿ ಮಂಜಮ್ಮನನ್ನು ನಾನು ವಿಚಾರಿಸಿರುವುದಿಲ್ಲ. ಮಂಜಮ್ಮನ ಮನೆಯ ಪಕ್ಕದ ಜಾಗ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನಾನು ಅದನ್ನು ವಿಚಾರಿಸಿರುವುದಿಲ್ಲ. ಸದರಿ ಜಾಗದ ಬಗ್ಗೆ ನಾನು ಅಸ್ಸೆಸ್ಮೆಂಟ್ ನಕಲನ್ನು ಪಡೆದಿರುವುದಿಲ್ಲ, ಅದನ್ನು ತನಿಖಾಧಿಕಾರಿಯು ಪಡೆದುಕೊಂಡಿರುತ್ತಾರೆ. ಆಸಾಮಿಯು ಓಡಿಹೋದಾಗ ಯಾವ ಬಣ್ಣದ ಬಟ್ಟೆ ಧರಿಸಿದ್ದ ಎಂದು ನನಗೆ ಈಗ ನೆನಪಿರುವುದಿಲ್ಲ. ಅದನ್ನು ನಾನು ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ. ಸದರಿ ವಿಚಾರಗಳನ್ನು ನಾನು ನನ್ನ ವರದಿಯಲ್ಲಿ ತಿಳಿಸಲು ಯಾವುದೇ ತೊಂದರೆ ಇರಲಿಲ್ಲ. ಆರೋಪಿಯು ಸದರಿ ದಿನದಂದು ಊರಿನಲ್ಲಿಯೇ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಂಬಂಧಿಸಿದಂತಹ ಜಾಗವೂ ಸಹ ಸದರಿ ಜಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಘಟನಾ ಸ್ಥಳದಲ್ಲಿ ಯಾವುದೇ ಸ್ಪ್ರೈಟ್ ನ ಪ್ಲಾಸ್ಟಿಕ್ ಬಾಟಲ್ ಆಗಲಿ, ಅಥವಾ ಕೊಳೆ ತುಂಬಿದ ಬಿಂದಿಗೆ ಆಗಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕೋಸ್ಕರ ನಾನೇ ಅವುಗಳನ್ನು ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಯಾವುದೇ ಮಹಜರು ಜರುಗಿಸಿರುವುದಿಲ್ಲ, ಯಾವುದೇ ಛಾಯಾಚಿತ್ರವನ್ನು ತೆಗೆಸಿರುವುದಿಲ್ಲ, ಯಾವುದೇ ಮುದ್ದೆಮಾಲನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ

ಸರಿಯಲ್ಲ. ನಿಪಿ.4 ರ ಛಾಯಾಚಿತ್ರದಲ್ಲಿ ನಾನೇ ಬಿಂದಿಗೆಯನ್ನು ಇಟ್ಟು ನಾನೇ ಛಾಯಾಚಿತ್ರವನ್ನು ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.4 ರ ಛಾಯಾಚಿತ್ರದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರು ಯಾರು ಎಂದು ಗುರುತಿಸಲು ನನಗೆ ಈಗ ನೆನಪಿಲ್ಲ. ನಿಪಿ.4 ರ ಛಾಯಾಚಿತ್ರವನ್ನು ಹೊಸಸಿದ್ದರಹಳ್ಳಿಯಲ್ಲಿ ತೆಗೆದಿರುವುದಿಲ್ಲ, ಈ ಪ್ರಕರಣಕೋಸ್ಕರ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(**ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

ಓ ಹೇ ಕೇ ಸ  ಇ ಎ ಒ

sd/-
2 ನೇ  ಹೆಪ್ರಪ್ರಃದಃನ್ಯಾಃದಂ.,ರವರು,
ಕಡೂರು.